ಮತ್ತು ಯಾವ ಉಪಕಾರವಿದೆ ಎಂಬುದನ್ನು ಇಡೀ ಜಗತ್ತು ತಿಳಿಯಲಿ ಎಂಬುದು ಅವರ ಉದ್ದೇಶವಾಗಿತ್ತು.

ಸೂಫಿ ಹಮೀದರ ಅಂಗಡಿ ಸರಿಯಾಗಿ ನಡೆಯುತ್ತಿರಲಿಲ್ಲ. ಏನೇ ಮಾಡಿದ್ದಾಗ್ಯೂ ಜನ ಅವರ ಅಂಗಡಿಗೆ ಬರುತ್ತಿರಲಿಲ್ಲ, ಅವರನ್ನು ಯಾರೂ ಕರೆಯುತ್ತಲೂ ಇರಲಿಲ್ಲ. ಅವರ ಆರ್ಥಿಕ ಸ್ಥಿತಿ ಹದಗೆಟ್ಟಿತ್ತು.

ಅದೊಂದು ದಿನ ಸೂಫಿ ಹಮೀದರ ಹೆಂಡತಿ ಹೇಳಿದಳು'ನೋಡಿ, ನನ್ನ ಮಾತು ಕೇಳಿ. ನೀವು ಇಂಗ್ಲಿಷ್ ಮಾತನಾಡುವುದನ್ನು ಕಲಿಯಿರಿ'.

ಸೂಫಿ ಹಮೀದರಿಗೆ ಹೆಂಡತಿಯ ಬುದ್ಧಿವಂತಿಕೆ ಕಂಡು ಆಶ್ಚರ್ಯವಾಯಿತು. ನಿನಗೆ ಹೇಗೆ ತಿಳೀತು, ನನ್ನ ದುರದೃಷ್ಟಕ್ಕೆ ಇಂಗ್ಲಿಷ್ ಮಾತನಾಡಲು ಬರದಿದ್ದದ್ದೇ ಕಾರಣ ಅಂತ? ಅವರು ತಮ್ಮ ಹೆಂಡತಿಯನ್ನೇ ಗಮನಿಸಿದರು.

ನೋಡಿ, ನಾನೇ ತಿಳಿಯದಿದ್ದರೆ ಇನ್ನಾರು ತಿಳೀತಾರೆ...? ನೀವು ನಿತ್ಯ ನಿದ್ರೆ ಮಾಡುವಾಗ, ಇಂಗ್ಲಿಷ್ ಮಾತನಾಡಲು ಬರುವಂತಿದ್ದರೆ ನನಗೆ ಈ ಪರಿಸ್ಥಿತಿ ಬರ್ತಿರಲಿಲ್ಲ ಅಂತ ಬಡಬಡಿಸುತ್ತೀರಿ.

ಸೂಫಿ ಅಜಮಲಿಯವರ ಮಗ ತನ್ನ ತಂದೆಗೆ ಹೇಳಿದ, 'ಡ್ಯಾಡಿ, ನೀವು ವ್ಯರ್ಥವಾಗಿ ಶಾಯರಿ ವಾಯರಿ ಬರೆಯುತ್ತೀರ. ಅದನ್ನು ಇವತ್ತು ಯಾರು ಅರ್ಥ ಮಾಡಿಕೊಳ್ತಾರೆ? ಈಗಿನ ಕಾಲದ ಸೂಫಿಗಳು ಸೂಫಿ ಮೂತಿಗಳನ್ನು ಸಿನಿಮಾ ಹಾಡುಗಳಲ್ಲಿ ತಂದು ಲಕ್ಷಾಂತರ ರೂಪಾಯಿ ಸಂಪಾದನೆ ಮಾಡ್ತಿದ್ದಾರೆ. ನೀವು ಈ ದಿಶೆಯಲ್ಲಿ ಯಾಕೆ ಟ್ರೈ ಮಾಡಬಾರದು?'

'ನಾನಲ್ಲಿ ಪ್ರಯತ್ನ ಮಾಡಿದ್ದೇನಪ್ಪ. ಗೀತ ರಚನೆಕಾರರು ಮತ್ತು ಮ್ಯೂಸಿಕ್ ಡೈರೆಕ್ಟರ್‌ಗಳು ಒಳಗೊಳಗೇ ಒಪ್ಪಂದ ಮಾಡಿಕೊಂಡಿದ್ದಾರೆ. ಅಲ್ಲಿ ಬೇರೆಯವರ ಬೇಳೆ ಬೆಯ್ಯೋದು ಕಷ್ಟ' ಎಂದರು ಸೂಫಿ ಅಜಮಲಿ.

'ಅದೆಲ್ಲಾ ಬಿಡಿ, ನೀವೇಕೆ ಡ್ಯಾನ್ಸ್ ಏರಿಯಾಕ್ಕೆ ಹೋಗಬಾರದು? ನಾನು ಬ್ಯಾಂಡ್ ಹಿಡೀತೀನಿ. ಸಿಸ್ಟರ್ ಡ್ಯಾನ್ಸ್ ಮಾಡ್ತಾಳೆ. ಅಮ್ಮಿ ಎಂಕರ್ ಆಗ್ತಾಳೆ. ಛೋಟೂ ಪಬ್ಲಿಸಿಟಿಯಲ್ಲಿ ತೊಡಗಿಸಿಕೊಳ್ತಾನೆ. ಅಜ್ಜನನ್ನು ಬುಕಿಂಗ್ ವಿಂಡೋದಲ್ಲಿ ಕೂರಿಸೋಣ'.

ನಾಲ್ವರು ಸೂಫಿಗಳಿಗೆ ನಿದ್ರಿಸಲು ಒಂದು ಕಂಬಳಿಯನ್ನು ಕೊಡಲಾಯಿತು. ಮೊದಲು ಆ ನಾಲ್ವರು ಸೂಫಿಗಳು ಕಂಬಳಿ ಕೊಟ್ಟವನಿಗೆ ರೇಗಿ ಹೇಳಿದರು, ನಾಲ್ಕು ಕಂಬಳಿ ಇಲ್ಲದಿದ್ದ ಮೇಲೆ ನಾಲ್ವರು ಸೂಫಿಗಳನ್ನೇಕೆ ಕರೆದಿರಿ? ಇದು ಸೂಫಿಗಳಿಗೆ ಮಾಡಿದ ಅವಮಾನ.

ಸರಿ, ಕಂಬಳಿ ಕೊಟ್ಟವ ಜೀವ ಉಳಿಸಿಕೊಂಡು ಓಟ ಕಿತ್ತ. ಓಡಿ ಹೋಗುವುದಕ್ಕೂ ಮೊದಲು , ನಾನು ಆಯೋಜಕರನ್ನು ಕಳುಹಿಸುತ್ತೇನೆ ಎಂದು ಹೋದ. ಅವನು ಹೋದ ಮೇಲೆ ಒಬ್ಬ ಸೂಫಿ ಹೇಳಿದ, ನಾನು ನಿಮ್ಮಂಥ ಮೂರು ಕೀಳು ಸೂಫಿಗಳೊಂದಿಗೆ ಒಂದು ಕಂಬಳಿಯಲ್ಲಿ ನಿದ್ರಿಸುವುದಕ್ಕೆ ಬದಲು ಸಾಯೋದಕ್ಕೆ ಇಷ್ಟ ಪಡ್ತೀನಿ.

ಸರಿ , ಹೀಗೇ ಸತ್ತು ಹೋಗು. ಮೂವರು ಸೂಫಿಗಳು ಅವನನ್ನು ಕೊಂದು ಹಾಕಿದರು.

* * *

ಈಗ ಮೂವರು ಸೂಫಿಗಳು ಉಳಿದರು.

ಮೂವರೂ, ಕಂಬಳಿಯನ್ನು ಮೂರು ತುಂಡುಗಳಾಗಿ ಮಾಡಿಕೊಂಡು ಮೂವರೂ ಒಂದೊಂದು ತುಂಡನ್ನು ತೆಗೆದುಕೊಳ್ಳಬೇಕು ಎಂದು ನಿರ್ಧರಿಸಿದರು. ಕಂಬಳಿಯನ್ನು ಹೇಗೆ ಹಂಚಿಕೊಳ್ಳುವುದು ಎಂಬ ಬಗ್ಗೆ ಮೂವರಲ್ಲಿ ಚರ್ಚೆ ನಡೆಯಿತು. ಆಗ ಮತ್ತೊಬ್ಬ ಸೂಫಿ ಸತ್ತ.

ಈಗ ಇಬ್ಬರು ಸೂಫಿಗಳು ಉಳಿದರು.

ಕಂಬಳಿಯ ಮೂರು ತುಂಡುಗಳನ್ನು ಇಬ್ಬರು ಸೂಫಿಗಳು ಹೇಗೆ ಹಂಚಿಕೊಳ್ಳುವುದು ಎಂಬ ಬಗ್ಗೆ ಆ ಇಬ್ಬರು ಸೂಫಿಗಳು ಹೊಡೆದಾಡಲು ಪ್ರಾರಂಭಿಸಿದರು. ಆಗ ಮತ್ತೊಬ್ಬ ಸೂಫಿಯ ಪ್ರಾಣ ಹೋಯಿತು. ಕಡೆಗೆ ಉಳಿದ ಒಬ್ಬ ಸೂಫಿ, ಈಗ ತನ್ನ ಮೇಲೆ ಮೂವರು ಸೂಫಿಗಳನ್ನು ಕೊಲೆ ಮಾಡಿದ ಆರೋಪ ಬರುತ್ತದೆ ಎಂದು ಯೋಚಿಸಿ ಆತ್ಮಹತ್ಯೆ ಮಾಡಿಕೊಂಡ.

ಆಗ ಆಯೋಜಕರು ಬಂದರು. ಅವರು ಮುಖಂಡರಾಗಿದ್ದರು. ಅವರೊಂದಿಗೆ ಇನ್ನೂ ಮೂವರು ಮುಖಂಡರಿದ್ದರು! ■

# ಶಿರೋವಸ್ತ್ರ

■ ಮಲಯಾಳಂ ಮೂಲ:
ಕೆ.ಎಂ. ಕುಞ್ಞಬ್ದುಲ್ಲ
ಕನ್ನಡಕ್ಕೆ: ಕೆ.ಕೆ. ನಾಯರ್



ಮಾವಿನ ತೋಪಿನ ನುರುಜು ಕಲ್ಲು ಹಾಸಲಾದ ಕಾಲುದಾರಿಗೆ ತಲುಪಿದಾಗ, ಅವಳು ಮತ್ತೊಮ್ಮೆ ಹಿಂತಿರುಗಿ ನೋಡಿದಳು. ಹಿಂದೆ ಬರುತ್ತಿದ್ದವನು, ಬಿಟ್ಟ ಬಾಣದ ಹಾಗೆ ಬಳಿಗೆ ತಲುಪಿರುವನು.

ಪ್ಲೀಸ್, ತುಸು ನಿಲ್ತೀಯ? ಬೆಂಗಡೆಯಿಂದ ಕೇಳಿ ಬಂತು ಪ್ರಶ್ನೆ.

ಅವಳು ನಿಲ್ಲಲಿಲ್ಲ. ತಿರುಗಿ ನೋಡಿ ಮೆಲ್ಲಗೆ ನಡೆದಳು. ಅವನು ತೀರಾ ಹತ್ತಿರದಿಂದ ಮುಗುಳ್ನಕ್ಕ.

ಜೊತೆಯಲ್ಲೆ ನಡೆಯುತ್ತಾ ಕೇಳಿದ:

ಕಾಲೇಜಿಗೆ ಮೊದಲ ಬಾರಿ ಇರ್ಬಹುದು, ಅಲ್ಲವಾ?

ಅದನ್ನು ತಿಳಿದು ನಿನಗೇನಾಗ್ಬೇಕು? ಅದನ್ನು ತಿಳಿಯಲಿಕ್ಕೇನು ಓಡುತ್ತಾ ತೇಕುತ್ತಾ ಹತ್ತಿರ ಬಂದದ್ದು? ಅವಳು ಮನಸ್ಸಿನಲ್ಲಿ ಕೇಳಿದಳು.

ಅವನು ಮುಂದುವರಿಸಿದ:

ಹೊಸಬರನ್ನು ಎದುರುಗೊಳ್ಳುವವರು ನೋಡಿಲ್ಲವಾದ್ರೆ. . . ಅವನು ಅರ್ಧದಲ್ಲೆ ಮಾತು ನಿಲ್ಲಿಸಿದ.

ಏನು, ಎತ್ತಿ ನುಂಗಿ ಬಿಡ್ತಾರಾ ಎಂಬ ಪ್ರಶ್ನೆಯ ಹಾಗೆ ಅವಳು ಅವನನ್ನು ಬೆರಗಿನಿಂದ ನೋಡಿದಳು. ಅವನು ಮುಂದುವರಿಸಿದ:

'ನೋಡಿಲ್ಲವಾದ್ರೆ ನಾಳೆ ಈ ತಟ್ಟ (ಶಿರವಸ್ತ್ರ) ವನ್ನು ತಲೆಗೆ ಹಾಕ್ದೆ ಬರೋದೇ ಒಳ್ಳೇದು.'

'ತಟ್ಟವನ್ನು ಹಾಕಿಕೊಂಡ್ ಬಂದ್ರೆ ಹಿಡಿದು ಕಟ್ಟಿ ಹಾಕ್ತಾರಾ?' ಅವಳು ಸಿಡುಕುತ್ತ ಕೇಳಿದಳು.

'ಹಾಗಲ್ಲ. ನನ್ನ ಅನುಭವವನ್ನಾಧರಿಸಿ ಬುದ್ಧಿ ಹೇಳಿದೆ ಅಷ್ಟೇ. ಅವನು ಸ್ವತಃ ಸಮರ್ಥಿಸಿದ. ಇವನ ಅನುಭವ! ಯಾರಿಗೆ ಬೇಕು ಅದು! ಅವಳು ಮನಸ್ಸಿನಲ್ಲಿ ಹೇಳಿದಳು. ಅವಳು ಪ್ರಶ್ನಿಸುವುದಿಲ್ಲವೆಂದು ಗೊತ್ತಾದಾಗ, ಅವನು ತಾನಾಗಿಯೆ ವಿವರಿಸಿದ:

'ನಾನು ಕಾಲೇಜಿಗೆ ಹೋದ ಮೊದಲ ದಿನ ಒಂದಷ್ಟು ವಿದ್ಯಾರ್ಥಿಗಳು ನನ್ನನ್ನು ಅಡ್ಡಗಟ್ಟಿದರು. ನನ್ನ ಶರಟಿನ ಗುಂಡಿಗಳನ್ನು ಬಿಚ್ಚಿದರು. ಬಳಿಕ ಪಂಚೆಯನ್ನು ಎತ್ತಿಕಟ್ಟಲು ಆದೇಶಿಸಿದರು. ನಾನು ಆದೇಶವನ್ನು ಪಾಲಿಸಿದಾಗ ಅವರೆಲ್ಲರು ಚಪ್ಪಾಳೆ ತಟ್ಟುತ್ತ ಹೇಳಿದರು; ಈಗ, ಪಡಪೋಶಿ ಹೈದನೊಬ್ಬ ಚುರುಚುರುಕಿನ ಹುಡ್ಗನಾದ. ಅವನು ಅಷ್ಟನ್ನು ಹೇಳಿ ನಗಾಡಿದ. ಜೊತೆಯಲ್ಲಿ ಅವಳೂ ನಗುವಳೆಂದು ಅಂದುಕೊಂಡ. ಆದರೆ, ಅವಳು ನಗಲಿಲ್ಲ.'

ಅವನು ಮುಂದುವರಿಸಿದ:

ಮುಗಿದಿಲ್ಲ. ನಾನು ಕೆಲವು ಗಜಗಳಷ್ಟು ದೂರಕ್ಕೆ ಹೆಜ್ಜೆ ಹಾಕಿದ್ದೆನಷ್ಟೆ, ಆಗ ನನ್ನನ್ನು ಬೇರೊಂದು ಗುಂಪಿನ ವಿದ್ಯಾರ್ಥಿಗಳು ಸುತ್ತುವರಿದರು. ಮೊದಲ ಗುಂಪಿನವರು ಮಾಡಿದುದರ ತದ್ವಿರುದ್ಧವಾಗಿತ್ತು ಎರಡನೆ ಗುಂಪಿನವರ ವರ್ತನೆ. ನಾನು ಪಂಚೆ ಎತ್ತಿಕಟ್ಟಿದ್ದನ್ನು ಬಿಚ್ಚಿದಾಗ, ಅವರೆಲ್ಲರೂ ಚಪ್ಪಾಳೆ ತಟ್ಟುತ್ತಾ ಹೇಳಿದರು: ಕಿಲಾಡಿ ಹೈದನೊಬ್ಬ ಈಗ ಜಂಟಲ್‌ಮ್ಯಾನ್ ಆಗಿರುವನು. ಕತೆಯನ್ನು ವಿವರಿಸಿ ಅವನು ಗಹಗಹಿಸಿ ನಗಾಡಿದ. ಅವಳೂ ನಗುವಳೆಂದು ಅಂದುಕೊಂಡ. ಆದರೆ, ಅವಳು ನಗಲಿಲ್ಲ. ಅವನು ಮಾತು ಮುಂದುವರಿಸಿದ:

ಸುಮಾರು ದಿನಗಳವರೆಗೆ ನಾನು ಮೊದಲ ಗುಂಪಿನವರನ್ನು ಕಾಣುವಾಗ ಶರಟಿನ ಬಟನುಗಳನ್ನು ಕಳಚಿ ಪಂಚೆಯನ್ನು ಎತ್ತಿಕಟ್ಟುತ್ತಿದ್ದೆ. ಎರಡನೆ